| O.S 143/2012 | DW-4 |
|---|---|

ಸಾಕ್ಷಿಗೆ ವಿಧಿಬದ್ಧವಾಗಿ ದಿನಾಂಕ 03.02.2026 ರಂದು ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ– ಪ್ರತಿವಾದಿ ಪರ ವಕೀಲರಿಂದ:–**

ನಾನು ನನ್ನ ಮುಖ್ಯ ವಿಚಾರಣೆಯ ಸಲುವಾಗಿ ಪ್ರಮಾಣ ಪತ್ರವನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಾನು ಕೊಟ್ಟ ಮಾಹಿತಿಯ ಮೇರೆಗೆ ವಕೀಲರು ತಯಾರಿಸಿರುತ್ತಾರೆ. ನಾನು ಅದರಲ್ಲಿರುವ ಎಲ್ಲಾ ಅಂಶಗಳನ್ನು ತಿಳಿದುಕೊಂಡು ನಂತರ ಸಹಿಯನ್ನು ಮಾಡಿರುತ್ತೇನೆ. ಸದರಿ ಪ್ರಮಾಣ ಪತ್ರದಲ್ಲಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತದೆ.

1. ನಾನು ನೀಲಕಂಠಯ್ಯರವರು ಮಾಡಿರುವ ವಿಲುನಾಮೆಗೆ ಸಾಕ್ಷಧಾರರಾಗಿ ಎರಡು ಸಹಿಗಳನ್ನು ಮಾಡಿರುತ್ತೇನೆ, ಸಾಕ್ಷಿಯು ಗುರುತಿಸಿದ್ದು ಸಾಕ್ಷ ಎರಡು ಸಹಿಗಳನ್ನು ನಿಡಿ–23(ಎ) ಮತ್ತು (ಬಿ) ಎಂದು ಗುರುತಿಸಲಾಯಿತು.

ನನ್ನೊಂದಿಗೆ ಮತ್ತೊಂದು ಸಾಕ್ಷಿಯಾಗಿ ಮರಿಗೌಡ ಸಹಿ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ.

**ಪಾಟೀ ಸವಾಲು:– ವಾದಿ ಪರ ವಕೀಲರಾದಃ ಶ್ರೀ CSR ರವರಿಂದ:–**

ನಾನು ಯರಿಯೂರು ಗ್ರಾಮದವರು. ನಾನು ಸ್ವಲ್ಪ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ನಾನು ಯರಿಯೂರು ಗ್ರಾಮದವರಿಂದ ಬಸವಣ್ಣ, ರಾಮಯ್ಯ ಮತ್ತು ರತ್ನಮ್ಮ ರವರು ಗೊತ್ತು ಎಂದರೆ ನಿಜ. ನನ್ನ ಮನೆಗು ಮಾರಯ್ಯರವರ ಮನೆಗೂ 50 ಮೀಟರ್ ಅಂತರವಿರುತ್ತದೆ. ಮಾರಯ್ಯರವರಿಗೆ ವಯಸ್ಸಾಗಿರುತ್ತದೆ ಎಂದರೆ ನಿಜ. ಮಾರಯ್ಯರವರಿಗೆ ಅಷ್ಟಾಗಿ ಕಿವಿ ಕೇಳಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ಮಾರಯ್ಯರವರು ನಿಡಿ–23 ವಿಲು ಮಾಡಲು ಕರೆದಿರುವುದಿಲ್ಲ. ನಾನು ಮತ್ತು ಮರಿಗೌಡ ಒಂದೇ ಗ್ರಾಮದವರು ಎಂದರೆ ನಿಜ. ವಿಲುನಾಮೆ ಬರೆಯಬೇಕೆಂದು ನನ್ನನ್ನು ಉಪ ನೋಂದಣಿ ಅಧಿಕಾರಿಗಳ ಕಛೇರಿಗೆ

ಕರೆದುಕೊಂಡು ಹೋಗಿರುತ್ತಾರೆ. ವಿಲುನಾಮೆ ಬರೆಯುವ ಸಂದರ್ಭದಲ್ಲಿ ರತ್ನಮ್ಮ ಮತ್ತು ಬಸವಣ್ಣ ಇರಲಿಲ್ಲ. ವಿಲುನಾಮೆಯಲ್ಲಿ ಇರುವ ಒಕ್ಕಣೆಯನ್ನು ನಾನು ಮತ್ತು ಮಾರಯ್ಯ ಹೇಳಿರುತ್ತೇವೆ.

ವಿಲುನಾಮೆಯನ್ನು ಯಾವ ಆಸ್ತಿಗಾಗಿ ಬರೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ವಿಲುನಾಮೆ ಬರೆಯುವ ಸಂದರ್ಭದಲ್ಲಿ ಮಾರಯ್ಯನಿಗೆ ಕಣ್ಣು ಮತ್ತು ಕಿವಿ ಅಷ್ಟಾಗಿ ಕಾಣುತ್ತಿರಲಿಲ್ಲ ಮತ್ತು ಕೇಳಿಸುತ್ತಿರಲಿಲ್ಲ ಆದ್ದರಿಂದ ಬಸವಣ್ಣ ಮತ್ತು ರತ್ನಮ್ಮ ರವರು ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸರಿಯಲ್ಲ. ನಾನು 1 ನೇ ಪ್ರತಿವಾದಿಯವರ ಮನೆ ನೋಡಿರುತ್ತೇನೆ. 1 ನೇ ಪ್ರತಿವಾದಿ ಪ್ರತ್ಯೇಕವಾಗಿ ಅಡುಗೆ ಮಾಡಿಕೊಂಡು ವಾಸವಿದ್ದರು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಅವರ ಜೀವಿತಾ ಕಾಲದಲ್ಲಿ ಪ್ರತ್ಯೇಕವಾಗಿ ವಾಸವಿದ್ದರು ಎಂದರೆ ಸಾಕ್ಷಿಯು ರತ್ನಮ್ಮರವರ ಜೊತೆ ವಾಸವಿದ್ದರು ಎಂದು ನುಡಿಯುತ್ತಾರೆ.

ಮಾರಯ್ಯನವರಿಗೆ ವಿಲುನಾಮೆಯಲ್ಲಿರುವ ಒಕ್ಕಣೆಯನ್ನು ಬರೆದ ನಂತರ ಓದಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ವಾದಿ ಮತ್ತು 2, 4 ಮತ್ತು 5 ನೇ ಪ್ರತಿವಾದಿಗಳು 1 ನೇ ಪ್ರತಿವಾದಿಯ ಮಕ್ಕಳು ಎಂದರೆ ನಿಜ. ದಾವಾ ಆಸ್ತಿಗಳು ವಾದಿ ಮತ್ತು ಪ್ರತಿವಾದಿಗಳ ಒಟ್ಟು ಕುಟುಂಬದ ಆಸ್ತಿಗಳು ಎಂದರೆ ಸರಿ. ಒಟ್ಟು ಕುಟುಂಬದ ಆಸ್ತಿಗಳು ಭಾಗ ಆಗಿರುವುದಿಲ್ಲ ಎಂದರೆ ಸಾಕ್ಷಿಯು ಭಾಗ ಆಗಿರುತ್ತದೆ ಎಂದು ನುಡಿಯುತ್ತಾರೆ, ಯಾವಾಗ ಭಾಗ ಆಗಿರುತ್ತದೆ ಎಂದರೆ ನನಗೆ ನೆನಪಿರುವುದಿಲ್ಲ.

ವಿಲುನಾಮೆಯನ್ನು ಪತ್ರ ಬರಹಗಾರರು ಅವರ ಕಛೇರಿಯಲ್ಲಿ ಬರೆದಿರುತ್ತಾರೆ ಎಂದರೆ ನಿಜ. ಸದರಿ ವಿಲುನಾಮೆಯನ್ನು ಬರೆಯುವ ಸಂದರ್ಭದಲ್ಲಿ ನಾನು ಮಾತ್ರ ಇದ್ದೆ, ರತ್ನಮ್ಮ ಮತ್ತು ಬಸವಣ್ಣರವರು ಇರಲಿಲ್ಲ. ನಾನು ಮತ್ತು ಸಾಕ್ಷಧಾರರು ಮಾತ್ರ ಪತ್ರ ಬರಹಗಾರರ ಕಛೇರಿಯಲ್ಲಿ ಹಾಜರಿದ್ದೆವು. ನಾನು, ಮಾರಯ್ಯ, ಮರಿಗೌಡ ಮತ್ತು ಪತ್ರ ಬರಹಗಾರರು ಇದ್ದರು. ನಾನು ಸಹಿಯನ್ನು ಪತ್ರ ಬರಹಗಾರರ ಕಛೇರಿಯಲ್ಲಿ ಹಾಗೂ ಉಪ ನೋಂದಣಿ ಅಧಿಕಾರಿಗಳ ಕಛೇರಿಯಲ್ಲಿ ಸಹಿ ಮಾಡಿರುತ್ತೇನೆ. ಪತ್ರ ಬರಹಗಾರರ ಕಛೇರಿಯಲ್ಲಿ 2 ಸಹಿಗಳನ್ನು ಮಾಡಿರುತ್ತೇನೆ.

| O.S 143/2012 | DW-4 |
|---|---|

ಮಾರಯ್ಯನವರಿಗೆ ಕಣ್ಣು ಕಾಣುತ್ತಿರಲಿಲ್ಲ ಹಾಗೂ ಕಿವಿ ಕೇಳುತ್ತಿರಲಿಲ್ಲ ರತ್ನಮ್ಮ ಮತ್ತು ಬಸವಣ್ಣರವರ ಮಾತುಗಳನ್ನು ಕೇಳಿಕೊಂಡು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳಾಗಿರುವುದರಿಂದ ಮಾರಯ್ಯ, ಚಂದ್ರು, ಚಿನ್ನಮ್ಮ ಮತ್ತು ಬಸವಣ್ಣನವರಿಗೆ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಪ್ರತಿವಾದಿ ಪರ ಮುಂದಿನ ಮುಖ್ಯ ವಿಚಾರಣೆಗೆ ಸಮಯಾವಕಶವನ್ನು ಕೋರಿದ್ದರಿಂದ ಆಲಿಸಿ ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದ ನ್ಯಾಯಾಲಯ ಯಳಂದೂರು.